## ಕೊಬ್ಬರಿ ಕಲೆ



ತೆಂಗಿನ ಕಾಯಿ, ಚಿಪ್ಪಿನಲ್ಲಿ ಕಲಾಕೃತಿ ತಯಾರಿಸುವುದನ್ನು ಕಂಡಿದ್ದೇವೆ. ಅಂತೆಯೇ ಕೊಬ್ಬರಿಯಲ್ಲೂ ವಿವಿಧ ವಸ್ತುಗಳನ್ನು ಕೆತ್ತನೆ ಮಾಡುವ ಕಲಾವಿದರೂ ಇದ್ದಾರೆ. ಇಂತಹ ಕಲಾಕೃತಿಗಳು ಹಬ್ಬ– ಹರಿದಿನ, ಮದುವೆ– ಮುಂಜಿ ಸೇರಿದಂತೆ ಶುಭ ಸಮಾರಂಭಗಳಲ್ಲಿ ಅಲಂಕರಿಸುತ್ತಾರೆ. ಕೊಬ್ಬರಿಯಲ್ಲಿ ಅನಂತಪದ್ಮನಾಭ ಅವತರಿಸಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

—ಶಿಲ್ಪಾ ಕೆ.




## ಊಟದ ತಟ್ಟೆಯಲ್ಲಿ ರಾಷ್ಟ್ರಗೀತೆ!

ಈ ಚಿತ್ರವನ್ನು ಸೂಕ್ಷ್ಮವಾಗಿ ನೋಡಿ, ನಮ್ಮ ಸರ್ಕಾರ ರೂಪಿಸಿದ ಪಠ್ಯ ಪುಸ್ತಕ. 'ಕಲಿ ನಲಿ'ಯ ಮುಖ ಪುಟ ಹಾಗೂ ಹಿಂಭಾಗದ ಪುಟ ಈಗ ಊಟ– ತಿಂಡಿಗೆ ಬಳಸುವ ಪೇಪರ್ ಪ್ಲೇಟಾಗಿದೆ. ಇದರಲ್ಲಿನ ದೋಷ ಕಂಡು ಬೇಸರವಾಗುತ್ತದೆ.

ಕಳೆದವಾರ ಪೇಪರ್ ಪ್ಲೇಟ್‌ಗಳನ್ನು ತಂದಿದ್ದೆ. ಅವುಗಳನ್ನು ಪಠ್ಯ ಪುಸ್ತಕ ಬಳಸಿ ತಯಾರಿಸಿದ್ದು ಅಂತ ಗಮನಕ್ಕೆ ಬಂತು. ಕುತೂಹಲಕ್ಕೆ ಪ್ಲೇಟ್ ತಿರುಗಿಸಿ ನೋಡಿದಾಗ ರಾಷ್ಟ್ರ ಗೀತೆ ಮತ್ತು ನಮ್ಮ ನಾಡ ಗೀತೆಗಳ ಮುದ್ರಿತ ಪುಟ ಇದ್ದವು. ನೋಡಿ ಕ್ಷಣ ವಿಚಲಿತನಾದೆ. ಈ ರೀತಿ ಪಠ್ಯ ಪುಸ್ತಕಗಳನ್ನು ಬಳಸಿ ಊಟದ ತಟ್ಟೆಗಳನ್ನು ಮಾಡುವುದನ್ನು ನಿಲ್ಲಿಸಬೇಕು ಎಂದೆನಿಸಿತು.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಪಟ್ಟೆ ಚಿಟ್ಟೆ

ಚಿಟ್ಟೆ ಎಂದರೆ ಚಿತ್ತಾರ. ಕಂದಮ್ಮಗಳೂ ಅದರ ಸೌಂದರ್ಯಕ್ಕೆ ಮಾರುಹೋಗಿ ಹಿಂದೆ ಓಡುತ್ತಾರೆ. ಚಿಟ್ಟೆ ಹಿಡಿಯಲು ಬೇಲಿ ಸುತ್ತಿದ ನೆನಪು ನಮ್ಮೆಲ್ಲರ ಬಾಲ್ಯದ ಭಾಗ. ಬಣ್ಣ ಬಣ್ಣದ ಚಿಟ್ಟೆಗಳನ್ನು ನೋಡುವುದೇ ಕಣ್ಣಿಗೆ ಹಬ್ಬ. ಚಿಟ್ಟೆ ಹಿಡಿಯಲು ಹೋದಾಗ ಇನ್ನೇನು ಕೈಗೆ ಸಿಕ್ಕೆ ಬಿಟ್ಟಿತು ಎನ್ನುವಷ್ಟರಲ್ಲಿ ಹಾರಿದಾಗ ಕನಸೊಂದು ಕೈ ಜಾರಿದ ಅನುಭವ ಈಗಲೂ ಕಾಡುತ್ತದೆ.

ಇತ್ತೀಚೆಗೆ ನಾನು ತೋಟದಲ್ಲಿದ್ದಾಗ ವಿಶಿಷ್ಟ ಪ್ರಭೇದದ ಚಿಟ್ಟೆ ಅದಾಗಿಯೇ ಕೈಮೇಲೆ ಕುಳಿತಿತ್ತು. ಬಣ್ಣ ಬಿಳಿಯದಾಗಿದ್ದು ಹೊಟ್ಟೆಯ ಮೇಲ್ಭಾಗದಲ್ಲಿ ಹುಲಿ ಬಣ್ಣದ ಪಟ್ಟೆ, ಕೆಳಭಾಗದಲ್ಲಿ ಬಿಳಿ, ರೆಕ್ಕೆಯ ಸುತ್ತ ಹಾಗೂ ತಲೆಯ ಭಾಗ ಕೆಂಪಾಗಿದೆ. ಇದರ ಬಗ್ಗೆ ಹೆಚ್ಚಿನ ಮಾಹಿತಿ ಗೊತ್ತಿಲ್ಲ.

—ಮೈಲಾರಪ್ಪ ಬೂದಿಹಾಳ ಮುಗಿಲಹಕ್ಕಿ

